**ಅಸಲು ದಾವಾ ಸಂಖ್ಯೆಃ 1013/2017**
**ಡಿ.ಡಬ್ಲ್ಯೂ -1**

ದಿಃ 13-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು ಶ್ರೀ ಆರ್ ಎಸ್ ಎಚ್ ರವರಿಂದಃ-**

4. ಈ ದಾವೆಯಲ್ಲಿ 1 ರಿಂದ 3 ನೇ ಪ್ರತಿವಾದಿಗಳು ಒಂದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೀರಿ ಎಂದರೆ ಪ್ರತ್ಯೇಕವಾಗಿ ಹಾಕಿದ್ದಾರಾ ಅಥವಾ ಒಂದೇ ಹಾಕಿದ್ದಾರಾ ಒಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಿಮಗೆ ಹೆಚ್ಚಿನ ಮಾಹಿತಿ ಇರುವ ಕಾರಣ ಎಲ್ಲಾ ಪ್ರತಿವಾದಿಗಳ ಪರವಾಗಿ ನೀವು ಸಾಕ್ಷ ನುಡಿಯುತ್ತೀರಿ ಎಂದರೆ ನಾನು ನನ್ನ ಪರವಾಗಿ ಮಾತ್ರ ಸಾಕ್ಷ ನುಡಿಯುತ್ತೀದ್ದೇನೆ ಎನ್ನುತ್ತಾರೆ. ಈ ಕೇಸಿನ ಬಗ್ಗೆ ಹಾಗೂ ಈ ದಾವಾ ಆಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ನಿಮಗೆ ಇದೆ ಎಂದರೆ ನನಗೆ ನನ್ನ ಜಾಗದ ಬಗ್ಗೆ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ . ವಾದಿ ಸಲ್ಲಿಸಿದ ಕೇಸಿನ ಬಗ್ಗೆ ಹಾಗೂ ನಾನು ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಪರವಾಗಿ ಹಾಜರು ಪಡೆಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತು. ನಾನು 1517/ಬಿ ಮತ್ತು 1517/ಸಿ ಎರಡು ದಾವಾ ಆಸ್ತಿಗಳನ್ನು ನಾನು ಖರೀದಿಸಿರುತ್ತೇನೆ. ಖರೀದಿ ಪತ್ರದಲ್ಲಿ ಇರುವ ಮಾಹಿತಿಯೂ ನನಗೆ ಗೊತ್ತಿಲ್ಲ .

ನಿಮಗೆ ಖರೀದಿ ಪತ್ರದ ವಿಚಾರ ಯಾವುದು ಗೊತ್ತಿಲ್ಲದೆ ಸಹಿ ಮಾಡಿರುತ್ತೀರಿ ಎಂದರೆ ನನಗೆ ನೆನಪಿಲ್ಲ. ಖರೀದಿ ಪತ್ರದಲ್ಲಿರುವ ಆಸ್ತಿ ವರ್ಣನೆಯನ್ನು ನಾನು ಇದುವರೆಗೂ ಓದಿ ನೋಡಿಲ್ಲ ಮತ್ತು ಕೇಳಿಯೂ ತಿಳಿದುಕೊಂಡಿರುವುದಿಲ್ಲ . ಪ್ರತಿವಾದ ಪತ್ರದಲ್ಲಿ ಇರುವ ಆಸ್ತಿಯ ವರ್ಣನೆಯ ಬಗ್ಗೆ ನನಗೆ ಮಾಹಿತಿ ಇದೆ . ಖರೀದಿ ಪತ್ರದಲ್ಲಿ ಆಸ್ತಿಯ ಬಗ್ಗೆ ವರ್ಣನೆಯ ಪ್ರಕಾರ ಯಾವ ಆಸ್ತಿಯನ್ನು ನಿಮಗೆ ದನೀಡಿರುತ್ತಾರೆ ಮತ್ತು ಯಾವ ಆಸ್ತಿಯನ್ನು ಸಮಾಯಿಕವಾಗಿ ಇಟ್ಟಿರುತ್ತಾರೆ ಎಂದರೆ ಕಾಮನ ಪ್ಯಾಸೆಜನ್ನು ಮಾತ್ರ ಇಟ್ಟಿರುವುದು ಗೊತ್ತೀರುತ್ತದೆ . ಆಸ್ತಿ ವರ್ಣನೆಯ ಬಗ್ಗೆ ಕ್ರಯ ಪತ್ರದಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ . ಕ್ರಯ ಪತ್ರದಂತೆ ಯಾವ ಆಸ್ತಿಯನ್ನು ನನ್ನ ಕಬ್ಜೆಗೆ ನೀಡಲಾಗಿದೆ ಮತ್ತು ಯಾವ ಆಸ್ತಿಯನ್ನು ಸಮಾಯಿಕವಾಗಿ ಇಡಲಾಗಿದೆ ಎಂದು ನನಗೆ ಮಾಹಿತಿ ಇದೆ . ನನ್ನ ಕಬ್ಜೆಗೆ 1517/ಬಿ ಮತ್ತು 1517/ಸಿ ಹಾಗೂ ಕಾಮನ ಪ್ಯಾಸೆಜನ್ನು ನೀಡಿರುತ್ತಾರೆ. ಕಾಮನ ಪ್ಯಾಸೆಜನ್ನು ಎಷ್ಟು ಮೊಬಲಗಿಗೆ ಖರೀದಿಸಿರುತ್ತೀರಿ ಎಂದರೆ ಸದ್ರಿ ಕ್ರಯ ಪತ್ರದ ಮಾಲೀಕರಾದ ರೊಡ್ಡ ರವರು ತಮ್ಮ ಪಾಲಿಗೆ ಬಂದ ಜಮೀನನ್ನು ನಮಗೆ

ನೀಡಿರುತ್ತಾರೆ. 1517/ಬಿ ಮತ್ತು 1517/ಸಿ ಜಮೀನನ್ನು ಎಷ್ಟು ಮೊಬಲಗಿಗೆ ಖರೀದಿಸಿರುತ್ತೇನೆ ಎಂದು ನೆನಪಿಲ್ಲ.

5. ಕಾಮನ ಪ್ಯಾಸೆಜಿಗೆ 1517/ಡಿ ಎಂದು ನಂಬರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1517/ಬಿ ಮತ್ತು 1517/ಸಿ ಕ್ರಯ ಪತ್ರಗಳು ಪ್ರತ್ಯೇಕವಾಗಿ ಇರುತ್ತವೆ ಎಂದರೆ ಸರಿ. 1517/ಡಿ ಗೆ ಸಂಬಂಧಿಸಿದ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡೆಸಿಲ್ಲ ಎಂದರೆ ಸರಿ. ರೊಡ್ಡರವರು ನಿಮಗೆ ಕಾಮನ ಪ್ಯಾಸೇಜನ್ನು ಖರೀದಿಗೆ ನೀಡಿಲ್ಲ ಎಂದರೆ ರೊಡ್ಡರವರು ಸದ್ರಿ ಕಾಮನ ಪ್ಯಾಸೆಜನ್ನು ನಮ್ಮ ಉಪಯೋಗಕ್ಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಕಾಮನ ಪ್ಯಾಸೇಜನ್ನು ಉಪಯೋಗಕ್ಕೆ ನೀಡಿದ ಬಗ್ಗೆ ಏನೂ ದಾಖಲೆ ಇದೆ ಎಂದರೆನನಗೆ ಗೊತ್ತಿಲ್ಲ. 1517/ಎ , 1517/ಬಿ ಮತ್ತು 1517/ಸಿ ಗಳ ಮಾಲೀಕರು ಸಮಾಯಿಕವಾಗಿ ಬಳಸಬೇಕು ಎಂದು ಕಾಮನ ಪ್ಯಾಸೇಜನ್ನು ಬಿಟ್ಟಿರುತ್ತಾರೆ ಎಂದರೆ 1517/ಬಿ ಮತ್ತು 1517/ಸಿ ಜಾಗಕ್ಕೆ ಮಾತ್ರ ಕಾಮನ ಪ್ಯಾಸೇಜನ್ನು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1517/ಎ ಗೆ ಕಾಮನ

ಪ್ಯಾಸೇಜನ್ನು ಬಿಟ್ಟಿಲ್ಲವೇ ಎಂದರೆ ಮುಖ್ಯ ರಸ್ತೆ ಇರುವುದರಿಂದ ಕಾಮನ ಪ್ಯಾಸೇಜನ್ನು ಬಿಟ್ಟಿಲ್ಲ ಎಂದು ನುಡಿಯುತ್ತಾರೆ . ಮುಖ್ಯ ರಸ್ತೆಗೆ ತಾಗಿಕೊಂಡು 1517/ಎ ಇರುವುದರಿಂದ ಕಾಮನ ಪ್ಯಾಸೇಜನ್ನು ಬಿಟ್ಟಿಲ್ಲ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡೆಸಿಲ್ಲ . 1517/ಬಿ ಮತ್ತು 1517/ಸಿ ಗಳ ಮಾಲೀಕರು ಅಷ್ಟೇ ಕಾಮನ ಪ್ಯಾಸೇಜನ್ನು ಬಳಸಬೇಕೆಂದು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡೆಸಿಲ್ಲ. 1517/ಬಿ ಮತ್ತು 1517/ಸಿ ಗೆ ಮಾತ್ರ ಕಾಮನ ಪ್ಯಾಸೇಜನ್ನು ಬಿಟ್ಟಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ಸದ್ರಿ ವಿಚಾರವನ್ನು ನಾನು ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ನನಗೆ ನೆನಪಿಲ್ಲ.

6. 1517/ಬಿ ಮತುತ 1517/ಸಿ ಗಳ ಜಾಗದಲ್ಲಿ ಕಟ್ಟಡ ನಿರ್ಮಿಸಲು ಕಾರಪೋರೇಷನಿಂದ ಪರವಾಣಿಗೆಯನ್ನು ಪಡೆದಿರುತ್ತೇನೆ . ಸದ್ರಿ ಪರವಾಣಿಗೆಯನ್ನು ನ್ಯಾಯಾಲಯಕ್ಕೆ ಹಾಜರು ಪಡೆಸಿಲ್ಲ ಎಂದರೆ ಸರಿ .

ಕಾರಪೋರೇಷನಿಂದ ಯಾವುದೇ ಪರವಾಣಿಗೆಯನ್ನು ಪಡೆಯದೇ ನಾವು ಕಟ್ಟಡ ನಿರ್ಮಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ಕಾಣುವ ಮಹಿಳೆಯು ನಿಮ್ಮ ತಾಯಿ ಎಂದರೆ ಸದ್ರಿ ಮಹಿಳೆ ನನ್ನ ತಾಯಿಯ ಹಾಗೆ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-14 ರಲ್ಲಿ ಕಾಣುವ ಜಾಗವು 1517/ಸಿ ಯಲ್ಲಿ ಇರುವ ಜಾಗ ಎಂದರೆ ಆ ರೀತಿ ಕಾಣುತ್ತೀಲ್ಲ ಎಂದು ನುಡಿಯುತ್ತಾರೆ. 1517/ಎ ಮುಖ್ಯ ರಸ್ತೆಗೆ ತಾಗಿಕೊಂಡಿದೆ ಎಂದರೆ ಸರಿ.

7. ಕಟ್ಟಡವನ್ನು ನಿರ್ಮಿಸಲು 2016 ರಲಿ ಪರವಾಣಿಗೆಯನ್ನು ಪಡೆದಿರುತ್ತೇನೆ. ಸದ್ರಿ ಪರವಾಣಿಗೆಯನ್ನು ಪಡೆದ ತಕ್ಷಣ ನಿರ್ಮಿಸಿರುತ್ತೇವೆ. ದಾವೆ ಸಲ್ಲಿಸುವ ಮೊದಲೇ ಕಟ್ಟಡ ನಿರ್ಮಾಣ ಕೆಲಸ ಪೂರ್ಣಗೊಂಡಿರುತ್ತದೆ. ಸದ್ರಿ ಕಟ್ಟಡದ ಬಗ್ಗೆ ಈಗ ಯಾವುದೇ ಕೆಲಸ ಬಾಕಿ ಇರುವುದಿಲ್ಲ ಎಂದರೆ ಸರಿ . ಕಟ್ಟಡ ಸಂಪೂರ್ಣಗೊಂಡ ಬಗ್ಗೆ ದೃಡಿಕರಣ ಪತ್ರವು ಇಂಜೀನಿಯರ ಅವರ ಬಳಿ ಇರಬಹುದು.

8. ಪ್ರತಿವಾದ ಪತ್ರವನ್ನು ಮೂರು ಜನ ಪ್ರತಿವಾದಿಯರ ಮಾಹಿತಿಯಂತೆ ತಯಾರಿಸಿ ಅದು ಸರಿ ಇದ್ದ ಕಾರಣ ನಾವು ಮೂರು ಜನ ಸಹಿ ಮಾಡಿರುತ್ತೇವೆ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿ ಪ್ಯಾರಾ ನಂಬರ 17 ರಲ್ಲಿ ಇತ್ತಿಚ್ಚಿಗೆ ಹಳೆಯ ಕಟ್ಟಡವನ್ನು ಕೆಡವಿ ಹೊಸ ಕಟ್ಟಡದ ಕೆಲಸ ಆರಂಭಿಸಿರುತ್ತೇವೆ ಎಂದು ನಮೂದಿಸಲಾಗಿದೆ ಎಂದರೆ 2016 ರಲ್ಲಿ ಕಟ್ಟಡ ನಿರ್ಮಾಣ ಕೆಲಸ ಪೂರ್ಣಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ಪ್ಯಾರಾ ನಂಬರ 17 ರಲ್ಲಿ ನಮೂದಿಸಿರುವ ವಿಚಾರ ತಪ್ಪು ಇದೆಯೆ ಎಂದರೆ ನನಗೆ ನೆನಪಿಲ್ಲ. ಪ್ರತಿವಾದ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿ. ದಾವೆ ಸಲ್ಲಿಸುವ ಪೂರ್ವದಲ್ಲಿಯೇ ನಮ್ಮ ಕಟ್ಟಡದ ಕೆಲಸ ಪೂರ್ಣಗೊಂಡಿತ್ತು ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ವಾದಿಯ ಪರವಾಗಿ ನೀವು ಕಟ್ಟಡವನ್ನು ನಿರ್ಮಾಣ ಮಾಡಬಾರದೆಂದು ತಾತ್ಕಾಲಿಕ ಮನಾಯಿ ಆಗಿತ್ತು ಎಂದರೆ ನನಗೆ ನೆನಪಿಲ್ಲ. ಸದ್ರಿ ಮನಾಯಿ ಆದೇಶ ಇದ್ದರೂ ಸಹ ನೀವು ಕಟ್ಟಡ ನಿರ್ಮಾಣದ ಕೆಲಸ ಮಾಡಿ ಆದೇಶದ ಉಲ್ಲಂಘನೆ

ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸದ್ರಿ ಆದೇಶದ ಉಲ್ಲಂಘನೆ ಮಾಡಿದ ಬಗ್ಗೆ ವಾದಿಯರು ಒಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸುಳ್ಳು.

9. ಕ್ರಯ ಪತ್ರದಂತೆ ಕಾಮನ ಪ್ಯಾಸೇಜನ್ನು ಇಟ್ಟ ಜಾಗವನ್ನು ಕಬಳಿಸಿಕೊಂಡು ಬೇಕಾಯ್ದೇಶೀರ ಕಟ್ಟಡ ನಿರ್ಮಿಸಿರುತ್ತೀರಿ ಎಂದರೆ ಸರಿಯಲ್ಲ. ಕಾಮನ ಪ್ಯಾಸೇಜನಲ್ಲಿ ನೀವು ಅಂಡರ ಗ್ರೌಂಡ ಟ್ಯಾಂಕನ್ನು ನಿರ್ಮಿಸಿರುತ್ತೇರಿ ಎಂದರೆ ದಾವೆ ಸಲ್ಲಿಸುವ ಮೊದಲು ಹಳೆಯ ಮಾಲೀಕರು ಅದನ್ನು ನಿರ್ಮಿಸಿದ್ದರು ಎಂದು ನುಡಿಯುತ್ತಾರೆ. ಕಾಮನ ಪ್ಯಾಸೇಜಿಗೆ ಅಂಡರ ಗ್ರೌಂಡ ಟ್ಯಾಂಕನ್ನು ನಿರ್ಮಿಸಿರುತ್ತೀರಿ ಹಾಗೂ ಮನೆಯ ಮುಂದೆ ಗೇಟನ್ನು ಹಾಕಿ ಕಾಮನ ಪ್ಯಾಸೇಜನ್ನು ಸಂಪೂರ್ಣ ಬಂದ ಮಾಡಿರುತ್ತೀರಿ ಎಂದರೆ 1517/ಎ ರ ಮಾಲೀಕರಾದ ಸುಶೀಲಾ ಶಿವಗುಂಡಿರವರು ಸದ್ರಿ ಕಾಮನ ಪ್ಯಾಸೇಜಿನಲ್ಲಿ ಅಡ್ಡಾಡುತ್ತಾರೆ ಎನ್ನುತ್ತಾರೆ. ಸುಶೀಲಾ ಶಿವಗುಂಡಿರವರು 1517/ಎ ರ ಪ್ರಸ್ತುತ ಮಾಲೀಕರು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನಾಯಾಲಯಕ್ಕೆ ಹಾಜರು ಪಡೆಸಿಲ್ಲ. ಸುಶೀಲಾ ಶಿವಗುಂಡಿರವರು 1517/ಎ ರ ಮಾಲೀಕರು ಎಂದು ಸುಳ್ಳು

ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಶೀಲಾ ಶಿವಗುಂಡಿರವರು 1517/ ಎ ರ ಜಮೀನನ್ನು ನನಗೆ ಖರೀದಿಗೆ ನೀಡಿರುತ್ತಾರೆ ಎಂದು ತೋರಿಸಲು ಯಾವುದೇ ಕ್ರಯದ ಕರಾರನ್ನು ನ್ಯಾಯಾಲಯಕ್ಕೆ ಹಾಜರು ಪಡೆಸಿಲ್ಲ ಎಂದರೆ ಆ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ.1517/ಎ ರ ಜಾಗವನ್ನು ಸುಶೀಲಾ ಶಿವಗುಂಡಿರವರಿಂದ ಕ್ರಯಕ್ಕೆ ಪಡೆಯಲು ಎಷ್ಟು ಮುಂಗಡ ಹಣವನ್ನು ನೀಡಿರುತ್ತಾರೆ ಎಂದು ನಿಮ್ಮ ವಿಚಾರವನ್ನು ಮುಖ್ಯ ವಿಚಾರಣೆ ಪತ್ರಮಾಣ ಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ನನ್ನ ಅಣ್ಣನಿಗೆ ಆ ವಿಚಾರ ಗೊತ್ತು ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಎಷ್ಟು ಮೊತ್ತವನ್ನು ಬರೆಸಲು ಮಾಹಿತಿ ನೀಡಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರು ಸಹ ಸತ್ಯ ಹೊರಗೆ ಬರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ನಾನು ಸತ್ಯ ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುತ್ತಾರೆ.

1517 ರಲ್ಲಿ ಕಾಮನ ಪ್ಯಾಸೇಜನ್ನು ಇಡಲಾದ ಜಾಗದಲ್ಲಿ ಬೇಕಾಯ್ದೇಶೀರ ಕಟ್ಟಡವನ್ನು ನಿರ್ಮಿಸಿ ವಾದಿಯರಿಗೆ ತೊಂದರೆ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**